# ಓದಿ, ನಕ್ಕು ಹಗುರಾಗಿ

## ನಕ್ಕರದೇ ಯುಗಾದಿ

ಫೈಟಿಂಗ್ ಜ್ಯೋತಿಷಿಗಳ ಮನೆಗೆ ಬಂದ. ವೀಳೆದೆಲೆ, ಅಡಿಕೆ ಮತ್ತು ಬಾಳೆಹಣ್ಣಿನ ಜೊತೆ ಐನೂರು ರೂಪಾಯಿಯನ್ನು ಇಟ್ಟು ರಷ್ಯಾ ಮತ್ತು ಉಕ್ರೇನ್‌ನ ಯುದ್ಧ ಭವಿಷ್ಯವನ್ನು ಕೇಳಿದ.

'ರಷ್ಯಾದ ಪುಟಿನ್‌ಗೆ ಗ್ರಹದೋಷ ಇದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೈಗಳು ಪ್ರಾಪ್ತಿ ಆಗ್ತಿವೆ. ಉಕ್ರೇನ್‌ನ ವ್ಲೋಲೇಡಿಮಿರ್ ಝುಲೆನ್‌ಸ್ಕಿಗೆ ಬಹುರಾಷ್ಟ್ರಗಳ ಸಂತಾಪ ಸಿಕ್ತಿದೆ. ಸಂತಾಪದಿಂದ ಜೀವನ ಸುಧಾರಣೆ ಆಗೊಲ್ಲ. ಗಾಣಗಿತ್ತಿ ಎಣ್ಣೆ ನೀಡದೆ ಬಾಯಿಮಾತಲ್ಲಿ ಅಯ್ಯೋ ಪಾಪ ಎಂದರೆ ಮಗುವಿನ ನೆತ್ತಿ ತಂಪಾಗೊಲ್ಲ ಎನ್ನುತ್ತದೆ ಗಾದೆ. ಯುದ್ಧಕ್ಕೂ ಎಣ್ಣೆಗೂ ಹತ್ತಿರದ ನಂಟು' ಎಂಬ ವಿಷಯವೂ ಬಂತು.

'ಯುದ್ಧ ಕಡಿಮೆ ಆಗಬೇಕಾದರೆ ಏನು ಮಾಡಬೇಕು?: ಎಂದು ಕೇಳಿದ ವಿಶ್ವ. ಜ್ಯೋತಿಷಿ ಕಣ್ಮುಚ್ಚಿ ದೂರದೃಷ್ಟಿಯಲ್ಲಿ ಯುದ್ಧಭೂಮಿ ನೋಡಿದ. ಸಂಜಯ ಕುರುಕ್ಷೇತ್ರವನ್ನು ಕೂತಲ್ಲೇ ನೋಡಿದಂತಿತ್ತು. ತಟಸ್ಥ ರಾಷ್ಟ್ರಗಳು ಧೃತರಾಷ್ಟ್ರರಂತೆ ಕಂಡಿದ್ದವು.

ಜ್ಯೋತಿಷಿ ಕಣ್ತೆರೆದ ಮೇಲೆ ಬಾಯ್ತೆರೆದ. 'ನಿಮ್ಮ ಗ್ರಾಮ ಪಂಚಾಯ್ತಿ ಸದಸ್ಯ ಸೋಮಾರಿ ಗೌಡನ ಕೈಲಿ ಪುಟಿನ್‌ಗೆ ಫೋನ್ ಮಾಡಿಸಿದರೆ ಯುದ್ಧ ನಿಲ್ಲುತ್ತೆ' ಎಂದ.

'ಧಂರೋಟ್ ಕೊಟ್ಟರೆ ದುರ್ಯೋಧನ ಯುದ್ಧ ನಿಲ್ಲಿಸೊಲ್ಲ. ತಲೆ ಇರೋ ಪುಟ್ಟಪ್ಪನಿಗೆ ಹೇಳಬಹುದು. ತಲೆ ಕೆಟ್ಟ ಪುಟಿನ್‌ಗೆ ಹೇಳಲಾಗದು. ಬೇರೆ ಪರಿಹಾರ ಇದ್ದರೆ ಹೇಳಿ ಸ್ವಾಮಿ' ಎಂದ.

'ಎಳ್ಳಿನ ದೀಪಾನ ಉತ್ತರ ದಿಕ್ಕಲ್ಲಿ ಹಚ್ಚಿ ಇಡಬೇಕು. ಬುಲೆಟ್ ಶಬ್ದ ನಿಲ್ಲಿಸಲು ಬುಲ್ಲೆಟ್ ಗಾಡಿಯನ್ನು ದಾನ ಮಾಡಬೇಕು' ಎಂದು ಜ್ಯೋತಿಷಿ ಹೇಳಿದ. ನೀರು ಹಾಕಿ ಓಡಿಸುವ ಗಾಡಿ ಬಂದಾಗ ದಾನ ಮಾಡಬಹುದಷ್ಟೆ ಎಂದುಕೊಂಡು ವಿಶ್ವ ಅಲ್ಲಿಂದ ಹೊರಟ.

ಮಾರ್ಕೆಟ್‌ಗೆ ಬಂದಾಗ ಮತ್ತೊಂದು ಆಘಾತ ಕಾದಿತ್ತು. ಕಡ್ಲೆಕಾಯೆಣ್ಣೆ ಅಂಗಡಿ ಮುಂದೆ ಕ್ಯೂ ಇತ್ತು. ಕೊರೊನಾ ಸಂದರ್ಭದಲ್ಲಿ ಎಣ್ಣೆ ಅಂಗಡಿಗಳಿಗೆ ತುಂಬಾ ಡಿಮ್ಯಾಂಡ್ ಇತ್ತು. ಕೊರೊನಾ ಕಡಿಮೆಯಾದ ಮೇಲೂ ಎಣ್ಣೆ ಅಂಗಡಿಗಳ ಮುಂದೆ ಈಪಾಟಿ ಜನ ಸೇರಿದ್ದಾರೆಂದರೆ ಅದೊಂದು ಆಶ್ಚರ್ಯ. ಆದರೆ ಆ ಎಣ್ಣೆ ಬೇರೆ, ಈ ಎಣ್ಣೆ ಬೇರೆ.

'ಎಣ್ಣೆ ಬೆಲೆ ಯಾಕೆ ಜಾಸ್ತಿ ಮಾಡಿದ್ದೀರ?' ಎಂದು ವಿಶ್ವ ಅಂಗಡಿಯಾತನನ್ನು ಕೇಳಿದ.

'ರೀ, ಸ್ವಾಮೀ, ಯುದ್ಧ ನಡೀತಾ ಇರೋದು ಗೊತ್ತಿಲ್ವಾ? ಯುದ್ಧ ನಡೆದ್ರೆ ಎಣ್ಣೆ ಸಿಗೊಲ್ಲ. ರಷ್ಯಾ ನಮಗೆ ಇಂಧನ ಕೊಡ್ತಿದೆ' ಎಂದ.

'ಅಡುಗೆ ಎಣ್ಣೆ ರೇಟ್ ಯಾಕೆ ಜಾಸ್ತಿ ಮಾಡ್ತೀರಾ? ಅಡುಗೆ ಎಣ್ಣೆ ಬೆಲೆ ಜಾಸ್ತಿ ಆದರೆ ಬೋಂಡ,

'ನಮ್ಮ ಯಜಮಾನರು ಅವರ ಆಫೀಸ್‌ನ ಕಲೀಗ್ ಕಮಲೀ ಜೊತೆ ಹೋಗಿ ಎಂಥದ್ದೋ ಫೈಲ್ಸ್ ಸಿನಿಮಾ ನೋಡ್ಕೊಂಡು ಬಂದಿದ್ದಾರೆ'
'ಅದು ಫೈಲ್ಸ್ ಅಲ್ಲ, ಕಾಶ್ಮೀರಿ ಫೈಲ್ಸ್'
'ಎರಡೂ ಬೇರೆ ಬೇರೇನಾ?'

